KACM030029862023

**2 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕಮಗಳೂರು.**

ಉಪಸ್ಥಿತರು  :          ಶ್ರೀ ಶರತ್ ಕುಮಾರ್ ಕೆ.ಎಸ್
ಬಿ.ಬಿ.ಎ., ಎಲ್. ಎಲ್. ಬಿ., ಎಲ್‌ಎಲ್‌ಎಂ. ,
**2** ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಚಿಕ್ಕಮಗಳೂರು.

ದಿನಾಂಕಃ  **21** ನೇ ಜುಲೈ **2026**

ಸಿ.ಸಿ.ಸಂಃ  **1962/2023**

ಫಿರ್ಯಾದುದಾರರುಃ   ರಾಜ್ಯದ ಪರವಾಗಿ  ಬಸವನಹಳ್ಳಿ  ಠಾಣಾ ಪೊಲೀಸರು
(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು).

ವಿರುದ್ಧ

ಆರೋಪಿತರುಃ

1. ಜಿ.ಕೆ.ಶಿವಾನಂದ  @ ಪಾಪಣ್ಣ
   ಬಿನ್ ಜಿ.ಪಿ.ಕೆಂಚೇಗೌಡ ,
   49 ವರ್ಷಗಳು ,
   ಲಾರಿ ಮಾಲೀಕರ ಸಂಘದ ಅಧ್ಯಕ್ಷರು ,
   ವಾಸಃ ಹೌಸಿಂಗ್ ಬೋರ್ಡ್,
   ಚಿಕ್ಕಮಗಳೂರು.

2. ರೇವಣ್ಣ  @ ಜೊಂಗಿರವಿ
   ಬಿನ್ ಲೇಟ್ ಮಲ್ಲರಾಜು ,
   40 ವರ್ಷಗಳು , ಲಾರಿ ಮಾಲೀಕರು ,
   ವಾಸಃ ತೇಗೂರು ಗ್ರಾಮ ,
   ಚಿಕ್ಕಮಗಳೂರು .

3. ಜಹೀರುದ್ದೀನ್ ಶರೀಫ್
ಬಿನ್ ಹುಸೇನ್ ಶರೀಪ್ ,
52 ವರ್ಷಗಳು , ಲಾರಿ ಮಾಲೀಕರು ,
ವಾಸಃ ಸರ್ವೋದಯ ಶಾಲೆಯ ಬಳಿ ,
ಟಿಪ್ಪುನಗರ , ಚಿಕ್ಕಮಗಳೂರು .

4. ಮೊಹಮ್ಮದ್ ಘನಿ @ ಅಬ್ದುಲ್ ಘನಿ ,
ಬಿನ್ ಕೆ.ಎಸ್. ಎಹ್ಸಾನ್ ಉಲ್ಲಾ ,
32 ವರ್ಷಗಳು , ಲಾರಿ ಮಾಲೀಕರು ,
ವಾಸಃ ಅಕ್ಸಾ ಮಸೀದಿ ಹತ್ತಿರ,
ಸಂತೆ ಮೈದಾನ , ಚಿಕ್ಕಮಗಳೂರು.

(ಪ್ರತಿನಿಧಿಸುವವರು ಶ್ರೀ ಜೆರಾಲ್ಡ್ ಡಯಾಸ್ ., ವಕೀಲರು)

| | |
|---|---|
| ಅಪರಾಧ ನಡೆದ ದಿನಾಂಕ | 09.08.2023 |
| ಅಪರಾಧ ವರದಿಯಾದ ದಿನಾಂಕ | 09.08.2024 |
| ಪಿರ್ಯಾದಿಯ ಹೆಸರು | ಇಸ್ಮಾಯಿಲ್ ಜಬೀವುಲ್ಲಾ |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 13.07.2026 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 13.07.2026 |
| ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ. 504, 324, 323 ಮತ್ತು 506 ಸಹ ಕಲಂ. 34. |
| ತೀರ್ಪಿನ ದಿನಾಂಕ | 21.07.2026 |

:: ತೀರ್ಪು ::

ಬಸವನಹಳ್ಳಿ ಪೊಲೀಸ್ ಠಾಣೆ, ಇವರು 1 ರಿಂದ 4 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 324, 323 ಮತ್ತು 506 ಸಹಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಿ.ಸಿ.ನಂ.1964/2023 ರಂತೆ ಕೌಂಟರ್ ಕೇಸ್ ದಾಖಲಾಗಿರುತ್ತದೆ.

**2**. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ

ದಿನಾಂಕ 09.08.2023 ಬೆಳಿಗ್ಗೆ 9.45 ಗಂಟೆಯ ಸಮಯದಲ್ಲಿ ಟೆಂಡರ್ ಚಿಕನ್ ಮುಂಭಾಗದ ಮಹೇಶ್‌ರವರ ಕ್ಯಾಂಟೀನ್ ಮುಂಭಾಗ ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾರವರು ಚಾಸಾ-4 ಆಸೀಫ್‌ರವರೊಂದಿಗೆ ಕಾಫೀ ಕುಡಿಯಲು ಹೋಗಿದ್ದ ಸಮಯದಲ್ಲಿ ಅಲ್ಲಿಗೆ ಬಂದ ಆರೋಪಿತರು ದಿನಾಂಕ 08.08.2023 ರಂದು ಲಾರಿ ಮಾಲೀಕರುಗಳ ಸಂಘದಿಂದ ಇಟ್ಟುಕೊಂಡಿದ್ದ ಮೀಟಿಂಗ್‌ನಲ್ಲಿ ಲಾರಿ ಮಾಲೀಕರ ಸಂಘದ ಅಧ್ಯಕ್ಷರ ಅವಧಿಯು ಕಳೆದ ತಿಂಗಳು 28 ನೇ ತಾರೀಖಿಗೆ ಮುಗಿದಿದ್ದು, ಈಗ ಬೇರೆಯವರು ಅಧ್ಯಕ್ಷರಾಗಲಿ ಎಂಬ ಅಭಿಪ್ರಾಯವನ್ನು ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾರವರು ತಿಳಿಸಿದ್ದಕ್ಕೆ , ಅದೇ ದ್ವೇಷ ಇಟ್ಟುಕೊಂಡು ಅವರನ್ನು ನಿನ್ನಮ್ಮನ ಕ್ಯಾಯ ಎಂದು ಅವಾಚ್ಯವಾಗಿ ಬೈದು, ಗಲಾಟೆ ಮಾಡಿ ಕೈಗಳಿಂದ ಅವರ ಮುಖಕ್ಕೆ ಮೈಕೈಗೆ ಹೊಡೆದು ನೋವುಂಟು ಮಾಡಿದ್ದು, 2 ನೇ ಆರೋಪಿಯು ಚಾಸಾ-1 ರವರ ಮೂಗಿಗೆ ಹೊಡೆದಿದ್ದು, 1 ಮತ್ತು 3 ನೇ ಆರೋಪಿತರು ಕೈಗಳಿಂದ ಅವರ ತಲೆಗೆ, ಬೆನ್ನಿಗೆ ಗುದ್ದಿ ನೋವುಂಟು ಮಾಡಿದ್ದು, 1 ನೇ ಆರೋಪಿಯು ದೊಣ್ಣೆ ರೀತಿ ಇರುವ ರೀಪಾರ್ ನಿಂದ ಅವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ನಂತರ

ಆರೋಪಿತರುಗಳೆಲ್ಲರೂ ಸೇರಿ ಇನ್ನೊಮ್ಮೆ ತಮ್ಮ ತಂಟೆಗೆ ಬಂದರೆ ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾ ರವರು ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಾಸಾ-9 ಶ್ರೀ ಇಲಿಯಾಸ್ ಇ., ಸಿಹೆಚ್.ಸಿ-81 ರವರು ನಿಪಿ-1 ರಂತೆ ಹೇಳಿಕೆಯನ್ನು ಪಡೆದುಕೊಂಡು ಬಂದು ಪ್ರಕರಣ ದಾಖಲಿಸಿ, ಸಾಕ್ಷಿದಾರರ ಹೇಳಿಕೆ ಪಡೆದುಕೊಂಡು, ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 323 ಮತ್ತು 506 ಸಹಕಲಂ 34 ರ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಆರೋಪಿತರು ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಆದೇಶಿಕೆ ಜಾರಿಯಾದ ನಂತರ ನ್ಯಾಯಾಲಯದ ಮುಂದೆ ಹಾಜರಾದ ಆರೋಪಿತರಿಗೆ ದೋಷರೋಪಣೆಯ ಪತ್ರದ ನಕಲನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಒದಗಿಸಲಾಗಿದೆ. ನ್ಯಾಯಾಲಯವು ದೋಷಾರೋಪಣೆ ರಚಿಸಿ, ಓದಿ ಹೇಳಿ ಕೇಳಲಾಗಿ, ಆರೋಪಿತನು ತಮ್ಮ ವಿರುದ್ದದ ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಫ್ರಾಸಾ-1 ಶ್ರೀ ಇಸ್ಮಾಯಿಲ್ ರವರನ್ನು ವಿಚಾರಣೆ ಮಾಡಿರುತ್ತಾರೆ ಮತ್ತು 2 ದಾಖಲೆಗಳನ್ನು ಗುರುತಿಸಿಕೊಂಡು ತಮ್ಮ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಿರುತ್ತಾರೆ.

**4**. ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಅಪರಾಧಿಕ ಹೇಳಿಕೆಗಳು ಕಂಡು ಬಾರದ ಕಾರಣ ಆರೋಪಿತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313(1)(ಬಿ)ರ ಅಡಿಯಲ್ಲಿ ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈಬಿಡಲಾಗಿದೆ .

**5.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತರ ಪರ ನ್ಯಾಯವಾದಿಗಳ ವಾದವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**6.** ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

1. ದಿನಾಂಕ 09.08.2023 ಬೆಳಿಗ್ಗೆ 9.45 ಗಂಟೆಯ ಸಮಯದಲ್ಲಿ ಟೆಂಡರ್ ಚಿಕನ್ ಮುಂಭಾಗದ ಮಹೇಶ್‌ರವರ ಕ್ಯಾಂಟೀನ್ ಮುಂಭಾಗ ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾರವರು ಚಾಸಾ-4 ಆಸೀಫ್ ರವರೊಂದಿಗೆ ಕಾಫೀ ಕುಡಿಯಲು ಹೋಗಿದ್ದ ಸಮಯದಲ್ಲಿ ಅಲ್ಲಿಗೆ ಬಂದ ಆರೋಪಿತರು ದಿನಾಂಕ 08.08.2023 ರಂದು ಲಾರಿ ಮಾಲೀಕರುಗಳ ಸಂಘದಿಂದ ಇಟ್ಟುಕೊಂಡಿದ್ದ ಮೀಟಿಂಗ್‌ನಲ್ಲಿ ಲಾರಿ ಮಾಲೀಕರ ಸಂಘದ ಅಧ್ಯಕ್ಷರ ಅವಧಿಯು ಕಳೆದ ತಿಂಗಳು 28 ನೇ ತಾರೀಖಿಗೆ ಮುಗಿದಿದ್ದು, ಈಗ ಬೇರೆಯವರು ಅಧ್ಯಕ್ಷರಾಗಲಿ ಎಂಬ ಅಭಿಪ್ರಾಯವನ್ನು ಅವರು ತಿಳಿಸಿದ್ದಕ್ಕೆ, ಅವರ ಮೇಲೆ ದ್ವೇಷ ಇಟ್ಟುಕೊಂಡು ಅವರನ್ನು ನಿನ್ನಮ್ಮನ ಕ್ಯಾಯ ಎಂದು ಅವಾಚ್ಯವಾಗಿ ಬೈದು, ಶಾಂತಿಭಂಗವನ್ನು ಮಾಡಲು ಉದ್ದೇಶಪೂರ್ವಕವಾಗಿ ಅವಮಾನ ಮಾಡಿದ್ದು, ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.504 ಸಹಕಲಂ 34 ರ ಅಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುವರೇ ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನು ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾರವರೊಡನೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, ಕೈಗಳಿಂದ ಅವರ ಮುಖಕ್ಕೆ, ಮೈಕೈಗೆ ಹೊಡೆದು ನೋವುಂಟು ಮಾಡಿದ್ದು, 2 ನೇ ಆರೋಪಿತನು ಕೈಯಿಂದ ಅವರ ಮೂಗಿಗೆ ಹೊಡೆದಿದ್ದು, 1 ಮತ್ತು 3 ನೇ ಆರೋಪಿತರು ಕೈಗಳಿಂದ ಅವರ ತಲೆಗೆ, ಬೆನ್ನಿಗೆ ಗುದ್ದಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆದಕಾರಣ ಆರೋಪಿತರು

ಭಾರತೀಯ ದಂಡ ಸಂಹಿತೆ ಕಲಂ.323 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುವರೇ ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನು ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾರವರೊಡನೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, 4 ನೇ ಆರೋಪಿತನು ದೊಣ್ಣೆ ರೀತಿ ಇರುವ ರೀಪರನ್ನು ತೆಗೆದುಕೊಂಡು ಅವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.324 ಸಹಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುವರೇ

4. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನು ಫ್ರಾಸಾ-1 ಇಸ್ಮಾಯಿಲ್ ಜಬೀವುಲ್ಲಾರವರನ್ನು ಉದ್ದೇಶಿಸಿ, ಅವರೊಡನೆ ಜಗಳ ತೆಗೆದು, ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಅಪರಾಧಿಕ ಭಯೋತ್ಪಾದನೆಯನ್ನುಂಟುವ ಮಾಡುವ ಕೊಲೆ ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.**506** ಸಹಕಲಂ **34** ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುವರೇ ?

5. ಏನು ಆದೇಶ ?

**7.** ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆಃ

**-:ಅಂಶಗಳು :-**

ಅಂಶ :- 1 ರಿಂದ 4 ನಕಾರಾತ್ಮಕವಾಗಿ,

ಅಂಶ : 5 ಅಂತಿಮ ಆದೇಶದಂತೆ,

**: ಕಾ ರ ಣ ಗ ಳು :-**

**8.** <u>ಅಂಶ-**1** ರಿಂದ **4**</u>**:-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಅನುಕೂಲತೆಯ ದೃಷ್ಟಿಯಿಂದ ಮತ್ತು ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಇವುಗಳನ್ನು ಜೊತೆಯಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

**9.** ಅಭಿಯೋಜನೆಯು ತನ್ನ ನಿಲುವನ್ನು ರುಜುವಾತುಪಡಿಸಲು ಒಟ್ಟು 9 ಜನ ಸಾಕ್ಷಿದಾರರನ್ನು ಸಾಕ್ಷ್ಯ ಪಟ್ಟಿಯಲ್ಲಿ ಹೆಸರಿಸಿಕೊಂಡಿರುತ್ತಾರೆ. ಗಾಯಳು ಮತ್ತು ಪಿರ್ಯಾದುದಾರರಾದ ಪ್ರಾಸಾ-1 ಶ್ರೀ ಇಸ್ಮಾಯಿಲ್ ಜಬೀವುಲ್ಲಾರು ತಮ್ಮ ನುಡಿ ಸಾಕ್ಷ್ಯದಲ್ಲಿ ನಿಪಿ-1 ಹೇಳಿಕೆ ದೂರನ್ನು ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿಕೊಂಡಿರುತ್ತಾರೆ. ಮುಂದುವರಿದು ಸಾಕ್ಷಿಯು ತಮ್ಮ ಸಾಕ್ಷ್ಯದಲ್ಲಿ ನಿಪಿ-1 ಹೇಳಿಕೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂಬುದಾಗಿ, ಆರೋಪಿತರು ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲ, ತನಗೆ ಈ ಪ್ರಕರಣದ ಬಗ್ಗೆ ಗೊತ್ತಿರುವುದಿಲ್ಲ, ತಾನು ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿರುವುದಿಲ್ಲ, ನಿಪಿ1 ಹೇಳಿಕೆಗೆ ತಾನು ಸುಮಾರು 3 ವರ್ಷಗಳ ಹಿಂದೆ ಪೋಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ, ತಾನು ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**10**. ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-1 ಶ್ರೀ ಇಸ್ಮಾಯಿಲ್ ಜಬೀವುಲ್ಲಾರವರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಸಾಕ್ಷಿದಾರರು ಪಾಟೀ ಸವಾಲಿನಲ್ಲಿ ಅಭಿಯೋಜನೆಯವರು ಸೂಚಿಸಿದ ಪ್ರಶ್ನೆಗಳನ್ನು ಅಲ್ಲಗಳೆದಿದ್ದು ಸದರಿ ಸಾಕ್ಷಿದಾರರ ಸಾಕ್ಷ್ಯವು

ಅಭಿಯೋಜನೆಯವರ ಪ್ರಕರಣಕ್ಕೆ ಅನುಗುಣವಾದ ಹಾಗೂ ಅನುಕೂಲಕರವಾದ ಯಾವುದೇ ಅಂಶಗಳನ್ನು ನುಡಿದಿರುವುದಿಲ್ಲ.

**11**. ಈ ಪ್ರಕರಣದ ಗಾಯಾಳು ಹಾಗೂ ಪಿರ್ಯಾದುದಾರರಾದ ಫ್ರಾಸಾ-1 ಶ್ರೀ ಇಸ್ಮಾಯಿಲ್ ಜಬೀವುಲ್ಲಾರವರು ಸದರಿ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನೀಡಿದ ಮೇರೆಗೆ ಉಳಿದ ಸಾಕ್ಷಿದಾರರು ಅಭಿಯೋಜನೆಗೆ ಎಷ್ಟೇ ಪೂರಕವಾಗಿ ಸಾಕ್ಷ್ಯ ನುಡಿದರೂ ಸಹ, ಆರೋಪಿತರು ಅಪರಾಧಿಗಳು ಎಂದು ನಿರ್ಣಯಿಸಲು ಸಾಧ್ಯವಾಗದ ನೆಲೆಯಲ್ಲಿ ದೋ.ಸಾ-2 ರಿಂದ 9 ರವರಿಗೆ ಸಮನ್ಸ್ ನೀಡಿ ಎನ್ನುವ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಅವರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ.

**12**. ಫ್ರಾಸಾ-1 ಶ್ರೀ ಇಸ್ಮಾಯಿಲ್ ಜಬೀವುಲ್ಲಾರವರನ್ನು ರವರು ಅಭಿಯೋಜನೆಗೆ ಅನುಕೂಲಕರವಾದ, ಪುಷ್ಟಿಕರವಾದ ಯಾವುದೇ ಅಂಶಗಳನ್ನು ನುಡಿದಿರುವುದಿಲ್ಲ. ಆದಕಾರಣ ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಅರೋಪಿತರು ಸದರಿ ಕೃತ್ಯ ಎಸಗಿರುತ್ತಾರೆ ಎಂಬ ಅಂಶವನ್ನು ಹೊರತರುವಲ್ಲಿ ಮತ್ತು ಸಾಬೀತುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ. ಈ ಮೂಲಕ ಅಭಿಯೋಜನೆಯು ಗುರುತಿಸಿಕೊಂಡ ನಿಪಿ.1 ಹೇಳಿಕೆ ದೂರು ಸಂಶಯಾಸ್ಪದವಾಗಿರುತ್ತದೆ ಮತ್ತು ಸಾಕ್ಷ್ಯದ ಕೊರತೆಯಿಂದ ತನ್ನ ಸಾಕ್ಷ್ಯದ ಮೌಲ್ಯವನ್ನು ಕಳೆದುಕೊಳ್ಳುತ್ತದೆ.

**13**. ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಆರೋಪಿತರಿಗೆ ಆಪಾದಿಸಲಾದ ಕೃತ್ಯವನ್ನು ಎಸಗಿದ್ದಾರೆ ಎನ್ನುವ ಸಂಗತಿಯನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಾಗಿ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೆ ಆರೋಪಿಗಳ ವಿರುದ್ಧದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು

ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ತೀರ್ಮಾನಿಸಿದ್ದು, ಈ ಮೇಲಿನ ಎಲ್ಲ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**14**. <u>ಅಂಶ **5**</u>**:-** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನ್ಯಾಯಾಲಯವು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ವರ್ತಿಸುತ್ತಾ 1 ರಿಂದ 4 ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ. 504, 323, 324 ಮತ್ತು 506 ಸಹಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಗಳಿಗಾಗಿ ನಿರ್ದೋಷಿಗಳು ಎಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.

1 ರಿಂದ 4 ನೇ ಆರೋಪಿತರು ಹಾಗೂ ಅವರ ಪರ ಜಾಮೀನುದಾರರು ಬರೆದು ಕೊಟ್ಟಿದ್ದ ಜಾಮೀನು ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಗಿದೆ.

ಪಿ.ಎಫ್.ನಂ.74/2023 (ಪಿ.ಆರ್.ನಂ.9/24) ರಡಿಯಲ್ಲಿ ವಶಪಡಿಸಿಕೊಳ್ಳಲಾದ ಸುಮಾರು 2½ ಅಡಿ ಉದ್ದದ ಒಂದು ಮರದ ರೀಪರ್ ಬೆಲೆ ಬಾಳದ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿಯು ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಿಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ **21** ನೇ ಜುಲೈ **2026** ರಂದು ನಾನು ಉದ್ಘೋಷಿಸಿದ್ದೇನೆ.)

Sd/-

(ಶರತ್ ಕುಮಾರ್ ಕೆ.ಎಸ್.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಚಿಕ್ಕಮಗಳೂರು.

## ಅ ನು ಬಂ ಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

ಫ್ರಾ.ಸಾ.1 ಶ್ರೀ ಇಸ್ಮಾಯಿಲ್ ಜಬೀವುಲ್ಲಾ

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

| | |
|---|---|
| ನಿ.ಪಿ.1 | ಹೇಳಿಕೆ ದೂರು |
| ನಿ.ಪಿ.1(ಎ) | ಫ್ರಾಸಾ-1 ರವರ ಸಹಿ |
| ನಿ.ಪಿ.2 | ಫ್ರಾಸಾ-1 ರವರ ಮರು ಹೇಳಿಕೆ |

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

- ಇಲ್ಲಾ -

**ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

- ಇಲ್ಲಾ -

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ-**

- ಇಲ್ಲಾ -

Sd/-
(ಶರತ್ ಕುಮಾರ್ ಕೆ.ಎಸ್.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಚಿಕ್ಕಮಗಳೂರು.

SHARATH KUMAR K S

Digitally signed by SHARATH KUMAR K S
Date: 2026.07.23 16:01:54 +0530